# ಎಲ್ಲ ಉಡುಪುಗಳಿಗೂ ಸಲ್ಲುವ ಪ್ರಶಸ್ತ ಹಾರ



ಬೆಳ್ಳಿಯ ಒಡವೆಗಳು ಸೀರೆ, ಕುರ್ತಾ, ಪ್ಯಾಂಟ್, ಸಲ್ವಾರ್‌ಗಳಿಗೂ ಚೆನ್ನಾಗಿ ಒಪ್ಪುತ್ತದೆ. ಇದರಲ್ಲೂ ಪ್ರಶಸ್ತ ಹಾರ, ಆ್ಯಂಟಿಕ್ ನೆಕ್ಲೆಸ್, ನೀಲಿ ಕಲ್ಲಿನ ಹಾರ, ಮುತ್ತು ಮಣಿಗಳ ಮಿಶ್ರಹಾರ ಫ್ಯಾಷನೆಬಲ್ ಆಗಿ ಇರುತ್ತದೆ. ಇಂದಿನ ಕಾಲಕ್ಕೆ ತಕ್ಕಂತೆ ಯುವತಿಯರು ಯಾವ ಸಂದರ್ಭಕ್ಕೆ ಬೇಕಾದರೂ ಧರಿಸಿಕೊಳ್ಳಬಹುದು.

■ ಚಿತ್ರ ಬರಹ:
**ಕೃಷ್ಣವೇಣಿ ಪ್ರಸಾದ್ ಮುಳಿಯ**



*ಬದುಕಿನಲ್ಲಿ ಹೊಸತನ ಬೇಕು..*
*ಆಭರಣ ನಮ್ಮನ್ನು ಉನ್ನತಿಯತ್ತ ಪ್ರಚೋದಿಸಬೇಕು!*
*ಜೀವನದಲ್ಲಿ ಹೊಸತನ ಬೇಕು..*
*ಸವಿಗನಸುಗಳು ಈಡೇರಬೇಕು, ಸ್ನೇಹ, ಪ್ರೀತಿ ತುಂಬಿ ತುಳುಕುತ್ತಿರಬೇಕು..*

ಸಂತೋಷದ, ಉಲ್ಲಾಸದ ಜೀವನಕ್ಕೆ, ಮಾನಸಿಕ ನೆಮ್ಮದಿಗೆ ಸದಾ ಬಯಸುತ್ತದೆ ಹೊಸತನ. ಫ್ಯಾಷನ್ ವಿಚಾರದಲ್ಲೂ ಅಷ್ಟೆ. ಕಾಲದಿಂದ ಕಾಲಕ್ಕೆ ಫ್ಯಾಷನ್ ಬದಲಾಗುತ್ತಲೇ ಇರುತ್ತದೆ. ನಾವು ಬಳಸುವ ಉಡುಪು, ಒಡವೆಗಳೂ ಆಯಾಯ ಕಾಲದ ಫ್ಯಾಷನ್‌ಗೆ ಅನುಗುಣವಾಗಿರಬೇಕು.

ಬರೀ ಚಿನ್ನದ ಒಡವೆ ಹಾಕಿಕೊಂಡರೆ ಮಾತ್ರ ಚೆನ್ನಾಗಿ ಕಾಣುತ್ತದೆ, ಫ್ಯಾಷನೆಬಲ್ ಆಗಿರುತ್ತದೆ ಎಂಬುದು ಹಳೆಯ ಮಾತಾಯಿತು. ಇಂದಿನ ಫ್ಯಾಷನ್ ಟ್ರೆಂಡ್‌ಗೆ ತಕ್ಕಂತೆ ಬೆಳ್ಳಿ, ಮುತ್ತು, ಹರಳುಗಳು, ಪ್ಲಾಟಿನಂ ಒಡವೆಗಳು ಮಹಿಳೆಯರ ಮೆಚ್ಚು ಕೂಡ ಆಗಿದೆ.

ಬೆಳ್ಳಿಯ ಒಡವೆಗಳು ಸೀರೆ, ಕುರ್ತಾ, ಪ್ಯಾಂಟ್, ಸಲ್ವಾರ್‌ಗಳಿಗೂ ಚೆನ್ನಾಗಿ ಒಪ್ಪುತ್ತದೆ. ಇದರಲ್ಲೂ ಪ್ರಶಸ್ತ ಹಾರ, ಆ್ಯಂಟಿಕ್ ನೆಕ್ಲೆಸ್, ನೀಲಿ ಕಲ್ಲಿನ ಹಾರ, ಮುತ್ತು ಮಣಿಗಳ ಮಿಶ್ರಹಾರ ಮುಂತಾದ ವೈವಿಧ್ಯಗಳಿದ್ದು, ಆಧುನಿಕ ಮನೋಭಾವದ ಫ್ಯಾಷನ್‌ಪ್ರಿಯ ಯುವತಿಯರಿಗೆ ಸೂಕ್ತವಾಗಿದೆ.

## ಪ್ರಶಸ್ತ ಹಾರ

ಇದೊಂದು ಅಪರೂಪದ ಆ್ಯಂಟಿಕ್ ಹಾರ, ಕಾಣಲು ಜೋಮಾಲೆಯಂತೆ ಇದ್ದರೂ ಇದರಲ್ಲಿ ಶಂಖ, ಚಕ್ರ, ಗದಾ, ಪದ್ಮ, ರುದ್ರಾಕ್ಷಿ ಇಂತಹ ಅಮೂಲ್ಯವಾದ ವಸ್ತುಗಳ ಚಿತ್ರಣವನ್ನು ಹೊಂದಿರುವ ಆಭರಣವಿದೆ. ರಂಗನಾಥನ ಶರೀರದಲ್ಲಿ ಸದಾ ಇರುವ ವಸ್ತುಗಳು ಅದನ್ನು ನಾವು ಧರಿಸಿದರೆ ನಮಗೆ ಅದೇ ಶಕ್ತಿ, ಬುದ್ಧಿವಂತಿಕೆ ಬಂದು ನಮ್ಮನ್ನ ನಾವು ಸದಾ ಶಿಸ್ತಿನಲ್ಲಿಡಲು ಸಾಧ್ಯ ಎನ್ನಬಹುದು, ಅಂತಹ ಶಕ್ತಿಯ ಚೈತನ್ಯವನ್ನು ತುಂಬುವ ಹಾರ ಇದು.